ದಿನಾಂಕಃ-29.06.2026 C.C.No.481/2025

DW-1

<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಮುಂದುವರೆದ ಮುಖ್ಯ ವಿಚಾರಣೆಃ- **Sri. N.B.H.** ವಕೀಲರಿಂದ ಆರೋಪಿಯ ಪರವಾಗಿ</u>

2. ನಾನು 2012ರಲ್ಲಿ ಸಾಲ ಪಡೆದಾಗ ಎರಡು ಖಾಲಿ ಚೆಕ್ಕುಗಳನ್ನು ವಕೀಲರ ಕಛೇರಿಯಲ್ಲಿ ನೀಡಿರುತ್ತೇನೆ. ದಿಃ30.09.2024ರಂದು ನಾನು ರೂ.60,000/- ಹಣವನ್ನು ಕಟ್ಟಿ ಎನ್ ಓ ಸಿ ಕೊಡಿ ಎಂದು ಕೇಳಿರುತ್ತೇನೆ, ಆದರೆ ಈಗ ಮೀಟಿಂಗ್ ಗಳು ಇದ್ದು, ಎರಡು - ಮೂರು ದಿನಗಳಲ್ಲಿ ಕೊಡುತ್ತೇನೆ ಎಂದು ಹೇಳಿದರು. ಆ ನಂತರ ಪುನಃ ಕೇಳಿದಾಗ ನೀವು ತಡವಾಗಿ ಸಾಲ ಮರುಪಾವತಿ ಮಾಡಿದ್ದೀರಿ, ಆದ್ದರಿಂದ ಅಷ್ಟು ಆತುರ ಏನು ಎಂದು ಕೇಳಿರುತ್ತಾರೆ. ನಾನು ಸಂಪೂರ್ಣ ಸಾಲ ಮರುಪಾವತಿ ಮಾಡಿದ್ದರೂ ಸಹ ಖಾಲಿ ಚೆಕ್ಕುಗಳನ್ನು ಬಳಸಿ, ಸುಳ್ಳು ಕೇಸು ಹಾಕಿ ನನಗೆ ತೊಂದರೆ ನೀಡಿದ್ದಾರೆ. ನಿಪಿ-1ರಲ್ಲಿರುವ ಮೊತ್ತವನ್ನು ನಾನು ಸಾಲವಾಗಿ ಪಡೆದಿರುವುದಿಲ್ಲ.

ಮುಂದುವರಿದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ